ಕಳೆಯಿತೆಂದು ಹಗುರಾದ. ನೇತ್ರನಿಗೆ ಸುದ್ದಿ ತಲುಪಿ ಅವಳು ಬಂದು ತಮ್ಮನನ್ನು ನೋಡಿಕೊಂಡು ಹೋದಮೇಲೆ ಮನಸ್ಸಿಗೆ ಮತ್ತಿಷ್ಟು ಗೆಲುವು. ಹಳಿ ತಪ್ಪಿದ ಗಾಡಿ ಮತ್ತೆ ಹಳಿಯ ಮೇಲೆ ಬರುತ್ತಿದೆಯೆಂಬ ಸಮಾಧಾನ. ಈ ಸಮಾಧಾನ ಅಲ್ಪಾಯುಷಿಯೆಂದು ಆ ಗಳಿಗೆಯಲ್ಲಿ ಅವನಿಗೆ ಗೊತ್ತಿರಲಿಲ್ಲ. ತಿಂಗಳುಗಳು ಕಳೆಯುತ್ತಾ, ಕಳೆಯುತ್ತಾ, ತಮ್ಮ ಮಗು ಎಲ್ಲಾ ಸಾಮಾನ್ಯ ಮಕ್ಕಳಂತೆ ವಯೋಸಹಜ ಚಟುವಟಿಕೆಗಳಿಲ್ಲದೆ ಒಂದು ಗೊಂಬೆಯಂತಿರುವುದನ್ನು ಕಂಡು ದಂಪತಿ ಗಾಬರಿಗೊಂಡಿದ್ದರು. ಅವರ ಸಂದೇಹ ತಜ್ಞ ವೈದ್ಯರಿಂದ ದೃಢವಾಗಿತ್ತು. ವಯಸ್ಸು ಮೀರಿದ ದಂಪತಿಗೆ ಹುಟ್ಟಿದ ಮಗುವಿಗೆ ಬುದ್ಧಿಮಾಂದ್ಯ. ಗಾಯದ ಮೇಲೆ ಬರೆ. ಗರ್ಭಿಣಿಯೆಂದು ಗೊತ್ತಾದ ಕ್ಷಣದಿಂದ ಆಘಾತಕ್ಕೊಳಗಾದವಳಂತಿದ್ದ ಮೀನಾಕ್ಷಿ ಈ ಪೆಟ್ಟನ್ನು ತಾಳಿಕೊಳ್ಳಲಾಗದೆ ತತ್ತರಿಸಿದಳು. ಕುಸಿದು ಹೋದಳು. ಏನೂ ಅರಿಯದ ಅಬೋಧ ಮಗುವಿನ ಮುಖ ನೋಡಿದಾಗಲೆಲ್ಲಾ ಅವಳ ಕರುಳಿಗೆ ಕೊಳ್ಳಿ ಇಟ್ಟಂತಾಗುತ್ತಿತ್ತು. ತಾವಿಬ್ಬರು ಇರುವವರೆಗೆ ಹೇಗೋ ನಡೆದೀತು. ನಾಳೆ ಇದರ ಗತಿ ಏನು? ಅಕ್ಕನೆನಿಸಿಕೊಂಡವಳು ಇದನ್ನು ಎದೆಗವಚಿಕೊಳ್ಳುತ್ತಾಳೆಯೇ? 'ಅವಳು ನೋಡಿಕೊಳ್ಳಲಿ' ಎನ್ನುವ ನಿರೀಕ್ಷೆ ಕೂಡಾ ದುಬಾರಿಯಾದದ್ದಲ್ಲವೇ? ಅವಳಿಗೆ ಅವಳದೇ ಸಂಸಾರ ಇರುವಾಗ ಕೊರಳಿಗೆ ಕುಂಟೆ ಕಟ್ಟಿಕೊಳ್ಳುವ ಮನೋಸ್ಥಿತಿ ಎಲ್ಲಿರುತ್ತದೆ? ಅವಳು ಮನಸ್ಸು ಮಾಡಿದರೂ ಅವಳ ಗಂಡನಮನೆಯವರಿಗೆ ಈ ಕುರಿತು ಯಾವ ಕಾಳಜಿ, ಕನಿಕರ ಇರಲು ಸಾಧ್ಯ? ಹೊಟ್ಟೆಗೆ ತುತ್ತನ್ನ ತಿನ್ನಿಸುವವರು ಗತಿ ಇಲ್ಲದೆ ತಮ್ಮ ಮಗು ಜೀವ ಬಿಡುವ ಪ್ರಸಂಗ ಬರುತ್ತದೆಯೇ? ಈ ಸೌಭಾಗ್ಯಕ್ಕೆ ಅದ್ಯಾಕೆ ಹುಟ್ಟಿ ಬರಬೇಕಿತ್ತು? ಭವಿಷ್ಯದ ಬಗ್ಗೆ ಯೋಚಿಸಿದಷ್ಟೂ ಎದೆ ಒಡೆದಂತಾಗುತ್ತಿತ್ತು ಮೀನಾಕ್ಷಿಗೆ. ಗಂಡನೊಡನೆ ಇದನ್ನೆಲ್ಲಾ ಹಂಚಿಕೊಂಡು ಹಲುಬುತ್ತಿದ್ದಳು ಮೀನಾಕ್ಷಿ. ಜನಾರ್ದನನಿಗೆ ಚಿಂತೆ ಇಲ್ಲವೇ? ಅವನ ಮನಸ್ಸಲ್ಲೂ ಬೆಟ್ಟದಷ್ಟು ಚಿಂತೆ ಇದೆ. ತನ್ನ ಸಂಕಟವನ್ನು ಒಡಲೊಳಗೆ ಹುಗಿದಿಟ್ಟುಕೊಂಡು ಅವನು ಹೆಂಡತಿಯನ್ನು ಸಾಂತ್ವನಿಸುತ್ತಿದ್ದ,

"ದೇವರು ಏನೋ ಒಂದು ದಾರಿ ತೋರಿಸ್ತಾನೆ ಕಣೇ. ಯಾರಿಗ್ಗೊತ್ತು, ನಮಗಿಂತಾ ಮೊದಲೇ ಇದು..."

ಅಷ್ಟೆನ್ನುವಾಗ ಗಂಟಲು ಗದ್ಗದಿಸುತ್ತಿತ್ತು. ಮಗನನ್ನು ಎದೆಗಪ್ಪಿಕೊಂಡು ಅವನು ಹನಿಗೂಡುತ್ತಿದ್ದ ಕಣ್ಣುಗಳನ್ನು ತನ್ನವಳಿಂದ ಮರೆಮಾಚಿಕೊಳ್ಳುತ್ತಿದ್ದ.

★★★

ಮೀನಾಕ್ಷಿ 'ಬಂದದ್ದೆಲ್ಲಾ ಬರಲಿ' ಎನ್ನುವ ಗಟ್ಟಿ ಗುಂಡಿಗೆಯವಳಲ್ಲ. ಇದುವರೆಗೆ ಅನುಭವಿಸಿದ ನೋವು, ತಲ್ಲಣಗಳು ಒಳಗಿಂದೊಳಗೆ ಅವಳನ್ನು ಕುಟ್ಟೆಹುಳದಂತೆ ಕೊರೆದು ಲಡ್ಡು ಮಾಡಿದ್ದುವು. ಅಕಾಲದಲ್ಲಿ ಹುಟ್ಟಿದ ಮಗು ಎಲ್ಲಾ ಮಕ್ಕಳಂತೆ ಸಹಜವಾಗಿದ್ದರೆ ಅವಳು ಮೊದಲಿನಂತೆ ಜೀವನ್ಮುಖಿಯಾಗುವ ಸಾಧ್ಯತೆ ಇತ್ತೇನೋ. ಆದರೆ ಆ ವಿಷಯದಲ್ಲೂ ದೇವರು ಕರುಣೆ ತೋರಿಸಲಿಲ್ಲ. 'ಸಾಕಾಯ್ತು...' ಎನ್ನುವುದನ್ನು ಪಾರಾಯಣದಂತೆ ಉರು ಹಾಕುತ್ತಿದ್ದ ಮೀನಾಕ್ಷಿ ಮಗುವಿಗೆ ಎರಡು ವರ್ಷ ಅನ್ನುವಾಗ ಶಾಶ್ವತವಾಗಿ ಈ ಲೋಕಕ್ಕೆ ವಿದಾಯ ಹೇಳಿ ಹೊರಟು ಹೋದಳು. ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಪರಿಸ್ಥಿತಿ ಬಿಗಡಾಯಿಸಿರಲಿಲ್ಲ. ಆದರೆ ಬದುಕಬೇಕೆಂಬ ಯಾವ ಹಂಬಲವೂ ಅವಳನ್ನು ತಡೆದಿರಲಿಲ್ಲ. ಮಡದಿ ನಿಧನಿಧಾನವಾಗಿ ಖಿನ್ನತೆಯ ತೆಕ್ಕೆಯಲ್ಲಿ ಸೇರಿಕೊಳ್ಳುತ್ತಿರುವುದನ್ನು ಗಮನಿಸಿದ್ದರೂ ಪರಿಸ್ಥಿತಿ ಇಷ್ಟು ಉಲ್ಬಣಿಸಿದೆಯೆಂಬ ಅರಿವು ಖಂಡಿತಾ ಜನಾರ್ದನನಿಗಿರಲಿಲ್ಲ. ಇದ್ದಿದ್ದರೆ... ಇದ್ದಿದ್ದರೆ... ಡಾಕ್ಟ್ರ